**Govt. order of Grant-in-Aid reflecting sanctioned post**

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :— ಏಳು ವರ್ಷಗಳ ಅಸ್ತಿತ್ವವನ್ನು ಪೂರೈಸಿರುವ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಓದಲಾಗಿದೆ :

ದಿನಾಂಕ: 1?-7-95ರಂದು ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ.

ಪ್ರಸ್ತಾವನೆ

ವೇತನಾನುದಾನ ಸಂಹಿತೆಯ ಪ್ರಕಾರ ಅರ್ಹವಾದ ಏಳು ವರ್ಷಗಳ ಅಸ್ತಿತ್ವವನ್ನು ಪೂರೈಸಿರುವ ರಾಜ್ಯದಲ್ಲಿನ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ವಿಷಯವನ್ನು ಸರ್ಕಾರ ಪರಿಶೀಲಿಸಿದೆ. 1986–87ನೇ ಸಾಲಿನಿಂದ ಪ್ರಾರಂಭಿಸಿರುವ, 1987–88ನೇ ಸಾಲಿನಲ್ಲಿ '' ಶಾಶ್ವತ ಅನುದಾನ ರಹಿತ '' ಎಂಬ ಷರತ್ತಿಗೊಳಪಟ್ಟು ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡುವವರೆಗೆ ಪ್ರಾರಂಭಿಸಲಾದ ಖಾಸಗಿ ಕಾಲೇಜುಗಳ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಇಡಿ 41 ಯುಯುಪಿಸಿ 95, ಬೆಂಗಳೂರು, ದಿನಾಂಕ: 28–07–1995

ಕರ್ನಾಟಕ ಕಾಲೇಜು ಶಿಕ್ಷಣ ಇಲಾಖೆಯ ವೇತನ ಅನುದಾನ ಸಂಹಿತೆಯ ನಿಬಂಧನೆ : ಷರತ್ತುಗಳಿಗೊಳಪಟ್ಟು ಮತ್ತು ಸರ್ಕಾರಿ ಆದೇಶ ಸಂಖ್ಯೆ ಇಡಿ 146 ಯುಯುಪಿಸಿ 79, ದಿನಾಂಕ: 3–10–81ರ ಆದೇಶದ ಮೇರೆಗೆ ಹಾಗೂ ನಂತರ ಆದೇಶವನ್ನು ಕಾಲಕಾಲಕ್ಕೆ ಪರಿಷ್ಕರಿಸಿದಂತೆ, ಸ್ಪಷ್ಟೀಕರಿಸಿರುವಂತೆ ಮತ್ತು ಈ ಬಗ್ಗೆ ಸುತ್ತೋಲೆಗಳಲ್ಲಿನ ಮಾರ್ಗಸೂಚಿಗೊಳಪಟ್ಟು ಮತ್ತು ಈ ಕೆಳಕಂಡ ನಿಬಂಧನೆ: ಷರತ್ತುಗಳನ್ನು ಪೂರೈಸುವುದಕ್ಕೊಳಪಟ್ಟು ಈ ಕೆಳಕಂಡ ಖಾಸಗಿ ಕಾಲೇಜುಗಳನ್ನು ದಿನಾಂಕ: 01–11–1995ರಿಂದ ಜಾರಿಗೆ ಬರುವಂತೆ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಿದೆ :—

| ಕ್ರ. ಸಂಖ್ಯೆ | ಕಾಲೇಜಿನ ಹೆಸರು (ಹಗಲು ಕಾಲೇಜುಗಳು) | ತಾತ್ಕಾಲಿಕವಾಗಿ ಅನುಮೋದಿಸಿರುವ ಹುದ್ದೆಗಳು (provisional) | |
|---|---|---|---|
| | | ಬೋಧಕರು | ಬೋಧಕೇತರರು |
| 01 | ಶ್ರೀಮದ್ ರಂಭಾಪುರಿ ಕಾಲೇಜು ಬಿ.ಆರ್.ಪ್ರಾಜೆಕ್ಟ್, ಭದ್ರಾವತಿ. | — | — |
| 02. | ಅಂಜುಮಾನ್ ಎಜುಕೇಷನ್ ಸೊಸೈಟಿ ಪ್ರಥಮ ದರ್ಜೆ ಕಾಲೇಜು, ಧಾರವಾಡ. | 25 | 22 |
| 3. | ಹೆಚ್.ಎ.ಎಸ್.ಎಸ್. ಕಾಲೇಜು, ಧಾರವಾಡ H.A.S.S College Dharwad. | 15 ✓ | 16 ✓ |
| 4. | ಗುಡ್ ನ್ಯೂಸ್ ವೆಲ್ಫೇರ್ ಸೊಸೈಟಿ ಪ್ರಥಮ ದರ್ಜೆ ಕಾಲೇಜು, ಕಲ್ಬುರ್ಗಿ. | 12 | 14 |
| 5. | ಚನ್ನಕೇಶವ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ. | 07 | 08 |
| 6. | ಕಲ್ಮೇಶ್ವರ ವಿದ್ಯಾ ಪ್ರಸಾರಕ ಸಮಿತಿ ಅವರ ಪ್ರಥಮ ದರ್ಜೆ ಕಾಲೇಜು, ಧಾರವಾಡ. | 18 | 15 |

S.H.A.S. SAMITI'S K.S.J. ARTS & S.M.S COMMERCE COLLEGE FOR WOMEN DHARWAD

... 2 ...

| | | | |
|---|---|---|---|
| 07. | ಗುರ್ಜರ್ ಎಜುಕೇಷನ್ ಸೊಸೈಟಿ, ಇವರ ಪ್ರಥಮ ದರ್ಜೆ ಕಾಲೇಜು, ಹುಬ್ಬಳ್ಳಿ. | 14 | 17 |
| 08. | ಶ್ರೀಮತಿ ಅಹಲ್ಯಾಬಾಯಿ.ಎ. ಪಾಟೀಲ ಪ್ರಥಮ ದರ್ಜೆ ಕಾಲೇಜು, ಬೆಳಗಾಂ. | 14 | 13 |
| 09. | ರೂರಲ್ ವಿದ್ಯಾವರ್ಧಕ ಸೊಸೈಟಿ ಶಾಂತವೀರ ಕಾಲೇಜು, ಬಾಬಲೇಶ್ವರ ಬಿಜಾಪುರ | — | — |
| 10. | ಎಸ್.ಸಿ.ಪಿ.ಎ. ಕಾಲೇಜು, ಮಹಾಲಿಂಗಪುರ, ಬಿಜಾಪುರ. | — | — |

---

ಕೂಲಂಕುಷ ತನಿಖೆಗೆ ಒಳಪಟ್ಟು.

(ಅ) ಕಾರ್ಯಭಾರಕ್ಕನುಗುಣವಾಗಿ ಸಿಬ್ಬಂದಿಯವರನ್ನು ವೇತನಾನುದಾನ ವ್ಯಾಪ್ತಿಗೆ ಒಳಪಡಿಸಲು ಅವಶ್ಯವಾದ ಮಾಹಿತಿಯನ್ನು ಈ ಆದೇಶಕ್ಕೆ ಲಗತ್ತಿಸಿರುವ 03 ಅನುಬಂಧಗಳಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ನೀಡಿದ ನಂತರ, ಸರ್ಕಾರ ಪರಿಶೀಲಿಸಿ, ಅಂತಿಮ ಆದೇಶ ಹೊರಡಿಸಿದ ತರುವಾಯ ವೇತನ ಅನುದಾನವನ್ನು ಕಾಲೇಜು ಶಿಕ್ಷಣ ನಿರ್ದೇಶಕರು ಬಿಡುಗಡೆ ಮಾಡಬೇಕು.

(ಆ) ಬೋಧಕ : ಬೋಧಕೇತರ ಹುದ್ದೆಗಳ ನೇಮಕಾತಿಗಳು ಕ್ರಮಬದ್ಧವಾದ ಆಯ್ಕೆ ಸಮಿತಿಯ ಮುಖಾಂತರ ಆಯ್ಕೆಗೊಂಡಿರತಕ್ಕದ್ದು. ಪ್ರತಿಯೊಬ್ಬ ಬೋಧಕ : ಬೋಧಕೇತರ ಸಿಬ್ಬಂದಿಯವರು ಅವರುಗಳ ಹುದ್ದೆಗೆ ನಿಗದಿಪಡಿಸಿರುವ ಕನಿಷ್ಟ ಶೈಕ್ಷಣಿಕ ಅರ್ಹತೆ, ವಯೋಮಿತಿ, ಇನ್ನಿತರ ಅರ್ಹತೆಗಳನ್ನು ಹೊಂದಿರತಕ್ಕದ್ದು.

(ಇ) ಸಂಬಂಧಪಟ್ಟ ಕಾಲೇಜಿನ ಆಡಳಿತ ಮಂಡಳಿಯವರು ಕ್ರಮಬದ್ಧವಾಗಿ ಮಾಡಿಕೊಂಡಿರುವ ಬೋಧಕ : ಬೋಧಕೇತರರ ನೇಮಕಾತಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಉಪನಿರ್ದೇಶಕರು ಮತ್ತು ಕಾಲೇಜು ಶಿಕ್ಷಣ ನಿರ್ದೇಶಕರಿಂದ ಅನುಮೋದನೆಗೊಂಡಿರತಕ್ಕದ್ದು.

(ಈ) ಬೋಧಕ : ಬೋಧಕೇತರ ಸಿಬ್ಬಂದಿಯು ವಾಸ್ತವವಾಗಿ ನಿಗದಿಪಡಿಸಿರುವ ಕಾರ್ಯಭಾರ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇರತಕ್ಕದ್ದು.

(ಉ) ಭವಿಷ್ಯದಲ್ಲಿ ಉದ್ಭವಿಸುವ ಬೋಧಕ : ಬೋಧಕೇತರ ಹುದ್ದೆಗಳನ್ನು ಸಂಬಂಧಪಟ್ಟ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಉಪನಿರ್ದೇಶಕರು : ನಿರ್ದೇಶಕರು, ಇವರ ಪೂರ್ವಾನುಮತಿಯೊಂದಿಗೆ ತುಂಬತಕ್ಕದ್ದು.

(ಊ) ಸೇವಾ ಸಿಬ್ಬಂದಿಯು ನೇಮಕಾತಿಯಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸಿರುವ ಮತ್ತು ಕಾಲಕಾಲಕ್ಕೆ ಪರಿಷ್ಕೃತಿಸಿರುವ ಮತ್ತು ಇತರೆ ಹಿಂದುಳಿದವರಿಗೆ ನಲ್ಲಬೇಕಾದ ಮೀಸಲಾತಿಯನ್ನು ಕಡ್ಡಾಯವಾಗಿ ಪರಿಪಾಲಿಸತಕ್ಕದ್ದು. ನೇಮಕಾತಿಗಳಲ್ಲಿ ಮೀಸಲಾತಿಯನ್ನು ಜಾರಿಗೊಳಿಸದಿದ್ದಲ್ಲಿ, ಅಂತಹ ಹುದ್ದೆಗಳನ್ನು ಪ್ರಚಲಿತ ಮೀಸಲಾತಿ

S.H.A.S. SAMITI'S K.S.J. ARTS & S.M.S COMMERCE COLLEGE FOR WOMEN DHARWAD

ನೀತಿಯನುಸಾರ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣದನ್ವಯ ಬ್ಯಾಕ್‌ಲಾಗ ರಿಕ್ತಸ್ಥಾನಗಳೆಂದು ಪರಿಗಣಿಸಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೇ ಪ್ರವರ್ಗಗಳ ನಿಷ್ಪತ್ತಿ : ಪ್ರಮಾಣದಾನುಸಾರ ರಿಕ್ತ ಸ್ಥಾನಗಳನ್ನು ತುಂಬುವ ತನಕ ಮುಂದುವರಿಸಿ ಅನುಪಾತ ಸರಿಯಾಗುವವರೆಗೂ ಅವರಿಂದಲೇ ನೇಮಕಾತಿಯನ್ನು ಭರ್ತಿ ಮಾಡತಕ್ಕದ್ದು. ಸರ್ಕಾರವು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಆದೇಶ : ಸುತ್ತೋಲೆ : ಸ್ಪಷ್ಟೀಕರಣಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.

(ಬಿ) ಬೋಧಕ : ಬೋಧಕೇತರರ ಶೈಕ್ಷಣಿಕ ಅರ್ಹತೆ ವಂಶೋಪಂತಿ ಇತ್ಯಾದಿ ಅರ್ಹತೆಗಳನ್ನು ಮೂಲ ಪ್ರಮಾಣ ಪತ್ರಗಳೊಂದಿಗೆ ಸರಿದೂಗಿಸಿಕೊಂಡು ಎಲ್ಲವೂ ನಿಯಮಾನುಸಾರ ಕ್ರಮಬದ್ಧವಾಗಿದ್ದಲ್ಲಿ ಮಾತ್ರ ವೇತನ ಅನುದಾನದ ವ್ಯಾಪ್ತಿಗೊಳಪಡಿಸಬೇಕು.

(ಸಿ) ವೇತನಾನುದಾನಕ್ಕೆ ಒಳಪಡಿಸಿರುವ ಕಾಲೇಜಿನ ಆಡಳಿತ ಮಂಡಳಿಯವರು ನಿಗದಿತ ನಮೂನೆಯಲ್ಲಿ ಕರಾರು ಪತ್ರ : ಅನುಮಾನ ಪತ್ರವನ್ನು ರೂ. 10.00 ಗಳ ಛಾಪಾ ಕಾಗದದಲ್ಲಿ (ತ್ರಿಪ್ರತಿಗಳಲ್ಲಿ) ಬರೆದು ಕೊಡತಕ್ಕದ್ದು. ಕರಾರು ಪತ್ರಕ್ಕೆ ಸಹಿ ಮಾಡಲು ಬರುವ ಸಕ್ಷಮ ಅಧಿಕಾರಿಗೆ ಅಧಿಕಾರ ನೀಡಿಕೆ ಪತ್ರವನ್ನು ಒದಗಿಸತಕ್ಕದ್ದು.

2. ಸರ್ಕಾರ : ಕಾಲೇಜು ಶಿಕ್ಷಣ ನಿರ್ದೇಶಕರು ಪ್ರಸ್ತುತ ಕಾರ್ಯನೀತಿಗನುಗುಣವಾಗಿ ಯಾವುದೇ ಷರತ್ತು : ನಿಬಂಧನೆಗಳನ್ನು ವಿಧಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ನಿಯಮ, ನಿಬಂಧನೆ ಮತ್ತು ಷರತ್ತು ಇತ್ಯಾದಿಗಳನ್ನು ಪೂರೈಸದಿರುವ : ಉಲ್ಲಂಘಿಸಿರುವ ಕಾಲೇಜುಗಳಿಗೆ ನೀಡಲಾಗುವ ಅನುದಾನವನ್ನು ರದ್ದುಗೊಳಿಸಲು : ಹಿಂತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಮತ್ತು ಕಾಲೇಜು ಶಿಕ್ಷಣ ನಿರ್ದೇಶಕರು ಕಾಯ್ದಿರಿಸಿಕೊಂಡಿರುತ್ತಾರೆ.

3. ವೇತನಾನುದಾನದ ವ್ಯಾಪ್ತಿಗೊಳಪಡಿಸುವ ಮುನ್ನ ಕಾಲೇಜು ಶಿಕ್ಷಣ ನಿರ್ದೇಶಕರು, ಪ್ರತಿಯೊಂದು ಬೋಧಕ : ಬೋಧಕೇತರ ನೇಮಕಾತಿಯನ್ನು ಸಾಮಾನ್ಯ ನಿಯಮಗಳನ್ನು ಪೂರೈಸಿರುವುದನ್ನು ಖಾತರಿಪಡಿಸಿಕೊಂಡು ಪ್ರಸ್ತಾವಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹೆಸರು, ಹುದ್ದೆಗೆ ನೇಮಕಗೊಂಡ ದಿನಾಂಕ ಇವೇ ಇತ್ಯಾದಿಗಳ ಬಗ್ಗೆ ವಿವರಗಳನ್ನು ಲಗತ್ತಿಸಿರುವ ಮಾದರಿ ಅನುಬಂಧಗಳಲ್ಲಿ ಸೂಕ್ತ ಆದೇಶ ಹೊರಡಿಸಲು ಸರ್ಕಾರಕ್ಕೆ ಹದಿನೈದು ದಿನಗಳೊಳಗಾಗಿ ಕಳುಹಿಸಲು ಆದೇಶಿಸಿದೆ.

4. ಈ ಸಂಬಂಧದಲ್ಲಿ ತಗಲುವ ವೆಚ್ಚವನ್ನು 1995-96ನೇ ಸಾಲಿನ ಶಿಕ್ಷಣ ಇಲಾಖೆಗೆ ಲೆಕ್ಕ ಶೀರ್ಷಿಕೆ '' 2202-ಸಾಮಾನ್ಯ ಶಿಕ್ಷಣ — 03 — 104 — ಸರ್ಕಾರೇತರ ಕಾಲೇಜುಗಳಿಗೆ ಮತ್ತು ಸಂಸ್ಥೆಗಳಿಗೆ ಸಹಾಯ — 1 — ಕಾಲೇಜು ಶಿಕ್ಷಣ — 02 — ಖಾಸಗಿ ಕಾಲೇಜುಗಳನ್ನು ಸಹಾಯಾನುದಾನ ಸಂಹಿತೆಗೆ ಅಳವಡಿಸುವುದು ( ಯೋಜನೆ ) 1995-96'' ಕ್ಕೆ ನೀಡಲಾಗುವ ಹೆಚ್ಚುವರಿ ಅನುದಾನ ರೂ. 100.00 ಲಕ್ಷಗಳ ಮಿತಿಗೆ ಒಳಪಟ್ಟು ಭರಿಸುವುದು.

S.H.A.S. SAMITI'S
K.S.J. ARTS & S.M.S COMMERCE COLLEGE FOR WOMEN
DHARWAD

... 4..

5. ಈ ಆದೇಶವನ್ನು ದಿನಾಂಕ: 10-07-95ರಂದು ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಹಾಗೂ ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 289 ಪಿಪಿ 95, ದಿನಾಂಕ: 17-07-1995ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/7/95
(ಬಿ. ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು. (ಎ ಅಂಡ್ ಇ):(ಆಡಿಟ್) ಸೇ/ಪತ್ರ)
2) ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು.
3) ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಗುಲ್ಬರ್ಗಾ.
4) ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು. (ಕಾಲೇಜು ಶಿಕ್ಷಣ ನಿರ್ದೇಶಕರ ಮುಖಾಂತರ)
5) ಆರ್ಥಿಕ ಇಲಾಖೆ ವೆಚ್ಚ-2
6) ಯೋಜನಾ ಇಲಾಖೆ (ಎಸ್-1) ಬಹು ಅಂತಸ್ತು ಕಟ್ಟಡ, ಬೆಂಗಳೂರು.
7) ಯೋಜನಾ ಶಾಖೆ, ಶಿಕ್ಷಣ ಇಲಾಖೆ.
8) ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
9) ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿಗಳ ಅಧ್ಯಕ್ಷರು/ಕಾರ್ಯದರ್ಶಿಗಳು (ಕಾಲೇಜು ಶಿಕ್ಷಣ ನಿರ್ದೇಶಕರ ಮುಖಾಂತರ)
10) ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
11) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
13, ಶಾಖಾ ರಕ್ಷಾ ಕಡತ : ಬಿಡಿ ಪ್ರತಿಗಳು.

S.H.A.S. SAMITI'S
K.S.J. ARTS & S.M.S COMMERCE COLLEGE FOR WOMEN
DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

## Government of Karnataka

**Subject:** Bringing Private First Grade Colleges completing seven years of existence under Salary grant-in-Aid

Read as Resolution taken at the meeting held by planning and finance on 10/07/95..

Preamble

As per the Government order colleges started in 1986-87 will come under salary grant in aid, where as colleges started in 1987-88 will remain unaided.

Government order No. 41 UPC 95, Bangalore, Date: 28/07/1995

As per the conditions of department of collegiate Education of Karnataka and Government order ED146 UPC 79 dated 3/10/81 is subjected to changes as and when required and as per the circulars for the following private aided colleges. The following colleges will be under the jurisdiction of grant-in-aid from 01/11/1995.

| Sl. No. | Name of the College | provisionally sanctioned posts | |
|---|---|---|---|
| | | Teaching | Non teaching |
| 1. | Shrimad Rambhapuri College, Bhadravati | - | - |
| 2. | Anjuman Education Society, First Grade College, Dharwad | 25 | 22 |
| 3. | H. A. S. S. College, Dharwad | 15 | 16 |
| 4. | Good news Welfare Society First Grade College Kalghatagi | 12 | 14 |
| 5. | Channakeshava First Grade College, Saligram | 07 | 08 |
| 6. | Kalmeshwar Vidya Prasaraka Samiti's First Grade College, Dharwad | 18 | 15 |

Sd/-
Order issued by Governor,
Karnataka State

S.H.A.S. SAMITI'S K.S.J. ARTS & S.M.S COMMERCE COLLEGE FOR WOMEN DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad